**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.07.02.2024**

## ಪಾಟಿ ಸವಾಲುಃ 6 ಮತ್ತು 7 ನೇ ಪ್ರತಿವಾದಿಗಳ ಪರ ಶ್ರೀ.ಎಮ್ ಜಿ ವಕೀಲರಿಂದಃ

1. ಈ ದಾವೆಯ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ನನ್ನ ತಾಯಿ ಅಂದರೆ ಮೃತ ವಾದಿ ಮದುವೆಯಾಗಿ ಸುಮಾರು 70 ವರ್ಷಗಳು ಆಗಿರುತ್ತದೆ. ಆ ರೀತಿ ಮದುವೆಯಾದ ಸಮಯದಿಂದಲೂ ನನ್ನ ತಾಯಿ ಗಂಡನ ಜೊತೆ ವಾಸವಾಗಿದ್ದರು ಎಂದರೆ ಸಾಕ್ಷಿ ಅವರ ಮನೆಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ-3 ಮತ್ತು 4 ರವರ ಮದುವೆಯಾಗಿ ಸುಮಾರು 50 ವರ್ಷಗಳು ಆಗಿರುತ್ತದೆ. 3 ನೇ ಪ್ರತಿವಾದಿ ವಿದ್ಯಾನಗರದಲ್ಲಿ ವಾಸವಾಗಿರುತ್ತಾರೆ. 4 ನೇ ಪ್ರತಿವಾದಿ 3-4 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. 4 ನೇ ಪ್ರತಿವಾದಿಗೆ 6 ಜನ ಮಕ್ಕಳು ಮತ್ತು ಗಂಡ ಇರುತ್ತಾರೆ. ನಿಪಿ-1 ರ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ತಾಯಿಯ ತಂದೆಗೆ ಮೊದಲನೇ ಮಗಳು ನನ್ನ ತಾಯಿ, 2 ನೇ ಅವರು ಅಬ್ದುಲ್ ಬಶೀರ್ 1 ನೇ ಪ್ರತಿವಾದಿ, 3 ನೇ ರವರು 3 ನೇ ಪ್ರತಿವಾದಿ, 4 ನೇ ರವರು 2 ನೇ ಪ್ರತಿವಾದಿ, 5 ನೇ ಅವರು 5 ನೇ ಪ್ರತಿವಾದಿ.

2. 1 ನೇ ಪ್ರತಿವಾದಿ ತೀರಿಕೊಂಡು ಸುಮಾರು 5 ವರ್ಷಗಳು ಆಗಿರುತ್ತದೆ. 1 ನೇ ಪ್ರತಿವಾದಿಗೆ 1 ಹೆಣ್ಣು ಮಗಳು ಮತ್ತು 2 ಗಂಡು ಮಕ್ಕಳು ಇರುತ್ತಾರೆ. 2 ನೇ ಪ್ರತಿವಾದಿಗೆ 68 ವರ್ಷಗಳು ಆಗಿರುತ್ತದೆ. ನನ್ನ ತಾತನ ಹೆಸರು ಹಸೇನ್ ಸಾಬ್. ಹಸನ್ ಸಾಬ್ ಎಂಬುವವರು ನನಗೆ ಗೊತ್ತಿರುತ್ತದೆ. ಶೇಕ್ ಬಶೀರ್ ಎಂಬುವವರು ನನಗೆ ಗೊತ್ತಿರುವುದಿಲ್ಲ. ಶೇಕ್ ರಶೀದ್ ಎಂಬುವವರು ನನಗೆ ಗೊತ್ತಿರುತ್ತದೆ. ಶೇಕ್ ಮತ್ತು ಬಶೀರ್ ಎಂಬುವವರು ನಮ್ಮ ಕುಟುಂಬದಲ್ಲಿ ಮಿಕ್ಸ್ ಆಗಿರುತ್ತದೆ. ಆ ರೀತಿ ಶೇಕ್ ರಶೀದ್ ಎಂಬುವವರು ನನ್ನ ಮಾವ ಎಂಬುದಾಗಿ ದಾಖಲಾತಿ ಕೊಟ್ಟಿದ್ದೀರ ಎಂದರೆ ಸಾಕ್ಷಿ ಈ ದಾವೆಯನ್ನು ನನ್ನ ತಾಯಿ ಹಾಕಿದ್ದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ನ್ನು ಹೊರತು ಪಡಿಸಿ ನಮ್ಮ ಸಂಬಂದವನ್ನು ತೋರಿಸಲು ಬೇರೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಹಸೇನ್ ಸಾಬ್ ರವರಿಗೆ ಯಾವ ನಾತೆ ಯಿಂದ ಬಂತು ಎಂದು ತೋರಿಸಲು ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಂತೆ ದಾವಾ ಆಸ್ತಿ ಮಾರಾಟ ಆದಾಗ ನನ್ನ ತಾಯಿ ಅದರಲ್ಲಿ ಹಕ್ಕು ಇತ್ತು ಎಂದು ಕೇಳಿದರು. ನಿಪಿ-2 ರ ಆಧಾರದ ಮೇಲೆ ದಾವಾ ಆಸ್ತಿಯು ಅಮಿನಾಬಿ ಅಂದರೆ 5 ನೇ ಪ್ರತಿವಾದಿ ರವರ ಹೆಸರಿಗೆ ದಾಖಲಾಗಿತ್ತು ಎಂದರೆ ಸರಿ. ನಿಪಿ-3 ರಂತೆ 5 ನೇ ಪ್ರತಿವಾದಿ ರವರು 6 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರ ನನ್ನ ತಾಯಿ

ಹೋಗಿ ಕೇಳಿರಲಿಲ್ಲ ಆ ವಿಚಾರ ನನ್ನ ತಾಯಿಗೆ ಗೊತ್ತಿರಲಿಲ್ಲ. ಆ ರೀತಿ 5 ನೇ ಪ್ರತಿವಾದಿಯ ಗಂಡ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪ್ರತಿವಾದಿ ಮಾಡಿರುವುದಿಲ್ಲ ಎಂದರೆ ಸರಿ.

3. 6 ನೇ ಪ್ರತಿವಾದಿ ನಿಪಿ-4 ರಂತೆ ದಾವಾ ಆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾಗ ನನ್ನ ತಾಯಿ ಹೋಗಿ ಕೇಳಿರಲಿಲ್ಲ ಆ ವಿಚಾರ ನನ್ನ ತಾಯಿಗೆ ಗೊತ್ತಿರಲಿಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಯು 7 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಎ ಷೆಡ್ಯೂಲ್ ಆಸ್ತಿಯು ಯಾರಿಗೆ ಮಾರಾಟ ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ 7 ನೇ ಪ್ರತಿವಾದಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ಕ್ರಯ ಪತ್ರದ ಆಧಾರದ ಮೇಲೆ ದಾವಾ ಆಸ್ತಿಗಳು ಈಗ ಕ್ರಯದಾರರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-1 ದಾಖಲಾತಿಯನ್ನು ಸೃಷ್ಟಿಮಾಡಿ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಹಸೀನ್ ಸಾಬ್ ರವರಿಗೂ ಈ ದಾವಾ ಆಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಹಸನ್ ಸಾಬ್ ಅವರ ಮಕ್ಕಳು ಶೇಕ್ ಬಶೀರ್, ಶೇಕ್ ರಶೀದ್ ರವರಿಗೆ ಸೇರಿದ್ದು ಅವರಿಗೆ ಮಾರಾಟ ಮಾಡುವ ಹಕ್ಕು ಇದ್ದು ಅದನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸದೇ ಇರುವ ಕಾರಣ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಯೋಗ್ಯರಾಗಿರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**